ದಿಮ್ಮಿಗಳಿಂದ ಸುಮಾರು ೧೫ ಲಕ್ಷ ರೂ. ಆದಾಯ ಬಂದಿದೆ. ಆದರೆ ದೇವರ ಕಾಡಿನಿಂದ ಅರಣ್ಯ ಸಂಪತ್ತನ್ನು ನಾಶ ಮಾಡಿಲ್ಲ.

ಈ) ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅರಣ್ಯ ಇಲಾಖೆಯವರು ಕೇವಲ ಬೆಳೆದ ಸತ್ತ ಹಾಗೂ ಮಳೆ ಗಾಳಿಗೆ ಬಿದ್ದಿರುವ ಮರಗಳನ್ನು ಮಾತ್ರ ಕಡಿದು, ಸಾಗಿಸಲಾಗಿದೆ.

ಉ) ಸುಮಾರು ೧೫೧.೪೦ ಹೆಕ್ಟೇರ್ ದೇವರ ಕಾಡು ಜಮೀನಿನ ಅತಿಕ್ರಮಣ ಆಗಿರುತ್ತದೆ.

ಊ) ಇಲ್ಲಿಯ ತನಕ ದೇವರ ಕಾಡುಗಳು ಕಂದಾಯ ಇಲಾಖೆಯವರ ನಿಯಂತ್ರಣದಲ್ಲಿದ್ದವು. ಸರಕಾರದ ಸಂಖ್ಯೆ. ಆರ್‌ಡಿ ೧೦೪ ಎಲ್‌ಜಿಪಿ ೭೯. ದಿನಾಂಕ ೨೬-೧೦-೧೯೮೫, ಆದೇಶದ ಪ್ರಕಾರ ದೇವರ ಕಾಡುಗಳ ಆಡಳಿತವನ್ನು ಅರಣ್ಯ ಇಲಾಖೆಗೆ ವಹಿಸಿರುತ್ತಾರೆ. ಇವುಗಳನ್ನು ಅರಣ್ಯ ಇಲಾಖೆಗೆ ವಹಿಸಿರುವುದರಿಂದ ಅತಿಕ್ರಮಣಕಾರರನ್ನು ಕಾನೂನಿನಂತೆ ತೆರವು ಮಾಡಿಸಲು ಕ್ರಮಗಳನ್ನು ತೆಗೆದು ಕೊಳ್ಳಲಾಗುವುದು.

ಶ್ರೀಮತಿ ಸುಮಾ ವಸಂತ.—ಇತ್ತೀಚೆಗೆ ದೇವರ ಕಾಡನ್ನು ಅತಿಕ್ರಮಣ ಮಾಡಿಕೊಂಡಿದ್ದಾರೆ; ಹಿಂದಿನಿಂದಲೂ ದೇವರ ಕಾಡನ್ನು ರಕ್ಷಣೆ ಮಾಡಿಕೊಂಡು ಬಂದಿದ್ದರು. ಈ ರೀತಿ ಅತಿಕ್ರಮಣ ಮಾಡಿಕೊಂಡಿರುವವರ ಬಗ್ಗೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು).—ಅಧ್ಯಕ್ಷರೇ, ಇತ್ತೀಚೆಗೆ ದೇವರ ಕಾಡು ಅತಿಕ್ರಮಣ ಆಗಿಲ್ಲ. ೧೯೭೨ನೇ ಇಸವಿಯಿಂದ ಅತಿಕ್ರಮಣ ಆಗಿದೆ. ಈಗ ಅರಣ್ಯ ಇಲಾಖೆಯವರು ವಹಿಸಿಕೊಂಡಿರುವುದರಿಂದ, ಅವರನ್ನು ಉಚ್ಚಾಟಿಸಲಿಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು.—ಪ್ರಶ್ನೆ ೫೭೯ (೭೫೩) ಮುಂದೂಡಲಾಗಿದೆ,

ಚುಕ್ಕೆ ಪ್ರಶ್ನೆ ೫೮೦ (೧೪೮೦). (ಮಾನ್ಯ ಸದಸ್ಯರು ಹಾಜರಿಲ್ಲ)

Nursery plots available in Bijapur District under the control of Forest Department

1353. SRI V. THUNGAL (Bilagi).—Will the Minister of state for Forest be please to state.—

(a) How many nursery plots are available in Bijapur District under the control of Forest Department.

(b) Forest Department has made any programme to raise nursery plots in Jamkhandi, Bilagi and Mudhol Taluks, under Ghataprabha Irrigation area.

(c) If so, will the Forest Department prepare perspective plans in this direction ?

SRI B. A. JEEVIJAYA (Hon'ble Minister of State for Forest).—

(a) There are 33 nursery plots with the Forest Department in Bijapur District.

The Talukwise details are as follows.—

1	Bijapur Taluk	1	Thidigundi
		2	Army School Compound
		3	Allapur
		4	Muklabavi
		5	Bhuthanala
		6	Babanagar
2	Indi Taluk	1	Horthi
		2	Thidugundi
		3	Bhepur
		4	Nimbargi
3	Sindgi Taluk	1	Devara Hepparagi
4	Basavana Bagevadi Taluk	1	Kholar
		2	Almatti
5	Jamkhandi Taluk	1	Kubarahalli
6	Mudhol Taluk	1	Mallapur
		2	Mudhol
7	Muddebihal Taluk	1	Madikeswara
		2	Jainapur
8	Bagalkot Taluk	1	Gulusekoppa
		2	Shabad
9	Belagi Taluk	1	Kovalli
		2	Badagundi
		3	Biligi
		4	Galagali
10	Badami Taluk	1	Anthapur
		2	Asongi
		3	Injunavadi
		4	Kulagere
11	Hongunda Taluk	1	Chikka Kudaligi
		2	Kamathagi
		3	Dammara
		4	Vadgeri

(b) The water from the Ghataprabha Dam is not made available during Feb. March. For nursery, the water is required throughout the year. Hence, it is not possible to raise nurseries in the command area.

However Canal Bank plantations are being raised on the bank of canals.

(c) Yes.

The annual (1985-86) Forest Development Programmes in the Bijapur District are as under.—

		(Rs. lakhs)	(Area Ha.)
1	N,R.E.P.	20.67	160
2	R.L.E.G.P.	29.50	590
3	D.P,A.P. (Central)	30.20	673
4	D,P.A.P. (State)	...	...
5	D.L.D.B. (RLEGP)	31.91	338 + 3800 ha. of bond planting
6	World Bank Social Forestry Project.	66.40	750 ha. + 70 lakhs seedlings
7	Special Component Plan	1.00	90 Beneficiaries
8	Soil Conservation (Afforestation)	2.00	...

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ, ಜವಂಖಿಂಡಿ, ಬೀಳಗಿ, ಮುಧೋಳ ತಾಲ್ಲೂಕುಗಳಲ್ಲಿ ಹೆಚ್ಚಿನ ಸಸಿ ಕ್ಷೇತ್ರಗಳನ್ನು ಬೆಳೆಸಲು ಫೆಬ್ರುವರಿ ಮಾರ್ಚ್ ನಂತರ ನೀರು ಸಿಕ್ಕುವುದಿಲ್ಲ ಎಂದು ಹೇಳಿದ್ದೀರಿ. ಆದರೆ ವಾಸ್ತವಿಕ ಸ್ಥಿತಿ ಬೇರೆ ಇದೆ. ಮಾರ್ಚ್ ೧೫ಕ್ಕೆ ನೀರು ನಿಲ್ಲಿಸಿದರೂ, ಅಲ್ಲಲ್ಲಿ ನೀರು ಬೇಕಾದಷ್ಟು ನಿಂತಿರುತ್ತದೆ. ನೀರು ಇಲ್ಲದ ಕಡೆ ಲಕ್ಷಾಂತರ ರೂಪಾಯಿ ಹಾಳು ಮಾಡುತ್ತೀರಿ. ಇಲ್ಲಿ ನೀರಿನ ಸೌಕರ್ಯ ಇದೆ, ಆದ್ದರಿಂದ ಇಲ್ಲಿ ಅರಣ್ಯ ಬೆಳೆಸಬೇಕು. ಕಾಲುವೆಗಳ ಮುಂಖಾಂತರ ಬೇಕಾದಷ್ಟು ನೀರನ್ನು ಹಾಯಿಸಬೇಕು. ಇದರ ಬಗ್ಗೆ ವಿಶೇಷವಾದ ಗಮನ ಕೊಡಬೇಕು. ವಿಶೇಷವಾದ ಕಾರ್ಯಕ್ರಮಗಳನ್ನು, ಅರಣ್ಯ ಬೆಳೆಸುವುದಕ್ಕೆ ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು).—ಮಾನ್ಯ ಸದಸ್ಯರು ಹೇಳಿದ ಸೂಚನೆಯನ್ನು ಒಪ್ಪಿಕೊಳ್ಳುತ್ತೇನೆ.

ಚಳ್ಳಕೆರೆ ತಾಲ್ಲೂಕಿನಲ್ಲಿ ಅಂತರ್ಜಲ ಪೂರ್ಣ ಬಳಕೆ ಕುರಿತು

೫೩೨. ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಪದೇ ಪದೇ ಬರಕ್ಕೆ ತುತ್ತಾಗುವ ಚಳ್ಳಕೆರೆ ತಾಲೂಕಿನಲ್ಲಿ ಅಂತರ್ಜಲ ಪೂರ್ಣ ಬಳಕೆ ಆಗುವಂತೆ ಒಂದು ಯೋಜನೆ ತಯಾರಿಸಿ ರೈತರಿಗೆ ನೀರಾವರಿ ಸೌಲಭ್ಯವನ್ನೊದಗಿಸಲು ಸರಕಾರದವರು ಕ್ರಮ ತೆಗೆದುಕೊಳ್ಳುವರೆ ?